

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಶಿಷ್ಟಾಚಾರ ಮತ್ತು ವ್ಯವಹಾರ

ಇಲ್ಲಿಗೆ ಎರಡು ತಿಂಗಳ ಹಿಂದೆ ಅಪರಿಚಿತ ವ್ಯಕ್ತಿಯೋರ್ವರಿಂದ ಒಂದು ದೂರವಾಣಿ ಕರೆ ಬಂದಿತ್ತು. ಯಾರೋ ಹಿಂದಿಯಲ್ಲಿ ಮಾತನಾಡುತ್ತಿದ್ದಾರೆಂದು ನಮ್ಮ ಆಪ್ತಸಹಾಯಕ ಫೋನನ್ನು ಕೊಟ್ಟ. ದೂರವಾಣಿಯ ಆಚೆಬದಿಯಲ್ಲಿದ್ದವರು ತಮ್ಮ ಪರಿಚಯವನ್ನು ಮಾಡಿಕೊಂಡರು. ವೈಯಕ್ತಿಕವಾಗಿ ಅವರ ಪರಿಚಯ ನಮಗೆ ಇರಲಿಲ್ಲವಾದರೂ ಅಪರಿಚಿತ ವ್ಯಕ್ತಿಗಳೊಂದಿಗೆ ಮಾತನಾಡುತ್ತಿದ್ದೇವೆಂಬ ಭಾವನೆ ನಮ್ಮ ಮನಸ್ಸಿನಲ್ಲಿ ಮೂಡಲೇ ಇಲ್ಲ. ಬಹಳ ವರ್ಷಗಳಿಂದ ಗೊತ್ತಿದ್ದು ಇತ್ತೀಚೆಗೆ ಸಂಪರ್ಕ ತಪ್ಪಿಹೋಗಿದ್ದ ಆತ್ಮೀಯರೊಂದಿಗೆ ಮಾತನಾಡಿದಂತಹ ಸುಖಕರ ಅನುಭವವಾಯಿತು. ನಮಗೆ ದೂರವಾಣಿ ಕರೆ ಮಾಡಿದ್ದ ಆ ವ್ಯಕ್ತಿ ಮತ್ತಾರೂ ಅಲ್ಲ; ಧಾರ್ಮಿಕ ಶ್ರದ್ಧಾಳುಗಳಾದ ಭಾರತೀಯರೆಲ್ಲರಿಗೂ ಸುಪರಿಚಿತರಾದ ಹರಿದ್ವಾರದ ಶ್ರೀಸ್ವಾಮಿ ರಾಮದೇವ್‌ರವರು. ನೂರಾರು ಕೋಟಿ ರೂ. ಖರ್ಚುಮಾಡಿ ಹರಿದ್ವಾರದ ಅವರ ಆಶ್ರಮದಲ್ಲಿ ಹೊಸದಾಗಿ ಕಟ್ಟಿಸಿರುವ 'ಪಾತಂಜಲ ಯೋಗಪೀಠ'ದ ಕಟ್ಟಡಗಳ ಸಂಕೀರ್ಣದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ನಮ್ಮನ್ನು ಆಮಂತ್ರಿಸುವುದಕ್ಕಾಗಿ ಅವರೇ ಸ್ವತಃ ಫೋನು ಮಾಡಿದ್ದರು. ಅವರ ಆ ಆತ್ಮೀಯ ಆಮಂತ್ರಣಕ್ಕೆ ಇಲ್ಲ ಎನ್ನಲು ಸಾಧ್ಯವಾಗಲಿಲ್ಲ.

ಭಾರತೀಯರನೇಕರಿಗೆ ಶ್ರೀಸ್ವಾಮಿ ರಾಮದೇವ್‌ರಂತೆ ಫೋನಿನಲ್ಲಿ ಮಾತನಾಡಲು ಬರುವುದಿಲ್ಲ. ಫೋನು ರಿಂಗಣಿಸಿದಾಗ ಎತ್ತಿಕೊಂಡ ತಕ್ಷಣವೇ ಆ ಕಡೆಯಿಂದ ಗಡುಸಾದ ದನಿಯಲ್ಲಿ ಕೇಳಿ ಬರುವ ಮಾತೆಂದರೆ 'ಯಾರು ನೀವು?' ಎಂಬ ಗದರಿಕೆ. ಫೋನನ್ನು ಎತ್ತಿಕೊಂಡದ್ದೇ ಮಹಾಪರಾಧವಾಯಿತೇನೋ ಎಂಬ ಭಾವನೆ ನಿಮಗೆ ಉಂಟಾದರೆ ಆಶ್ಚರ್ಯವೇನೂ ಇಲ್ಲ. ಅವರ ಮಾತಿಗೆ ಪ್ರತಿಯಾಗಿ ನಿಮ್ಮ ಮನೆಯವರು ಅಥವಾ ಆಪ್ತಸಹಾಯಕರು 'ನೀವು ಯಾರು? ಯಾರು ಬೇಕಾಗಿತ್ತು ನಿಮಗೆ?' ಎಂದು ಕೇಳಿದರೆ ಅವರು ಕೆರಳಿ ಕೆಂಡಾಮಂಡಲವಾಗುತ್ತಾರೆ. ಈ ಪ್ರಶ್ನೆಯಿಂದ ಅವರ ಸ್ಥಾನಮಾನಕ್ಕೆ ಧಕ್ಕೆಯುಂಟಾದಂತೆ ಪ್ರತಿಕ್ರಿಯಿಸುತ್ತಾರೆ. ಅವರು ಯಾರು ಎಂಬುದನ್ನು ಅವರ ದನಿಯಿಂದ ನೀವು ಗುರುತಿಸಬೇಕೆಂದು ನಿರೀಕ್ಷಿಸುತ್ತಾರೆ. ಪಾಶ್ಚಾತ್ಯದೇಶಗಳಲ್ಲಿ ಹಾಗಲ್ಲ. ಉದಾಹರಣೆಗೆ ಜರ್ಮನ್ ರಾಷ್ಟ್ರಗಳಲ್ಲಿ ನಾವು ಕಂಡಂತೆ ಫೋನ್ ಎತ್ತಿಕೊಂಡವರು "Guten Tag" (Good Day) ಎಂದು ಶುಭಹಾರೈಸಿ "Frau ____ hier" ಎಂದು ತಮ್ಮ ಹೆಸರನ್ನು ಮೊದಲೇ ಹೇಳುತ್ತಾರೆ. ಫೋನ್ ಮಾಡಿದವರೂ ಸಹ ಅಷ್ಟೇ ಸೌಜನ್ಯದಿಂದ ಅವರಿಗೆ ಶುಭಹಾರೈಸಿ ತಮ್ಮ ಹೆಸರನ್ನು ಹೇಳಿ "Darf ich bitte mit Herrn ____ sprechen?" ಅಂದರೆ 'ನಾನು ಇಂಥವರೊಡನೆ ಮಾತನಾಡಬಹುದೇ?' ಎಂದು ಕೇಳುತ್ತಾರೆ. ಹೀಗೆ ಸಂಭಾಷಣೆ ಮೆಲುದನಿಯಲ್ಲಿ ಅತ್ಯಂತ ಸೌಜನ್ಯದಿಂದ ನಡೆಯುತ್ತದೆ. ಪಕ್ಕದಲ್ಲಿದ್ದವರಿಗೂ ಅವರ ಮಾತು ಕೇಳಿಸುವುದಿಲ್ಲ. ನಮ್ಮವರು ಎಷ್ಟು ಒರಟಾಗಿ ಮತ್ತು ಜೋರಾಗಿ ಫೋನಿನಲ್ಲಿ ಆರ್ಭಟಿಸುತ್ತಾರೆಂದರೆ ಅವರ ಮಾತುಗಳು ದೂರದಲ್ಲಿರುವವರನ್ನು ಗಟ್ಟಿದನಿಯಲ್ಲಿ ಕೂಗಿ ಕರೆಯುತ್ತಿರುವಂತೆ ಇರುತ್ತವೆ! ಯಾರಿಗೆ ಫೋನ್ ಮಾಡಿರುತ್ತಾರೋ ಆ ವ್ಯಕ್ತಿಯ ಕಿವಿಗೇ ನೇರವಾಗಿ ಅಪ್ಪಳಿಸುವಷ್ಟು ಅವರ ದನಿ ತೀವ್ರತರವಾಗಿರುತ್ತದೆ.

ಆಧುನಿಕ ತಂತ್ರಜ್ಞಾನದ ಆವಿಷ್ಕಾರಗಳಲ್ಲಿ ಮೊಬೈಲ್ ಫೋನ್ ಒಂದು ವಿಶಿಷ್ಟ ಕೊಡುಗೆ. ಜನರ ಮಧ್ಯೆ ನೇರವಾದ ಸಂಪರ್ಕ ಮತ್ತು ಸಂವಹನ ಮಾಧ್ಯಮವಾದ ಇದರ ಪಾತ್ರ ಹಿರಿದಾದುದಾಗಿದೆ. ಪ್ರಪಂಚದ ಯಾವ ಮೂಲೆಗಾದರೂ ನೀವು ಕ್ಷಣಾರ್ಧದಲ್ಲಿ ಫೋನಾಯಿಸಬಹುದು. ಹಿಂದಿನ ಕಾಲದಂತೆ ಫೋನ್‌ಕಾಲ್ ಬುಕ್ ಮಾಡಿ ಇಡೀ ದಿನವೆಲ್ಲಾ ಕಾಯಬೇಕಾದ ಪ್ರಮೇಯವಿಲ್ಲ. ಯಶೋದೆಗೆ ತನ್ನ ಮುದ್ದು ಕೃಷ್ಣನ ಬಾಯಲ್ಲಿ ಬ್ರಹ್ಮಾಂಡವೇ ಕಂಡಂತೆ ಇಡೀ ಪ್ರಪಂಚವೇ ಈಗ ನಿಮ್ಮ ಜೇಬಿನಲ್ಲಿದೆ. ಆಧುನಿಕ ಜೀವನದಲ್ಲಿ ಇದು ಎಷ್ಟು ಉಪಯುಕ್ತವಾದ ಉಪಕರಣವಾಗಿದೆಯೋ ಅಷ್ಟೇ ಕಿರಿಕಿರಿಯನ್ನುಂಟುಮಾಡುವ 'ಕರ್ಣಪಿಶಾಚಿ'ಯೂ ಆಗಿದೆ. ಅದನ್ನು ಹೇಗೆ ಬಳಸಿಕೊಳ್ಳಬೇಕೆಂಬ ವಿವೇಚನೆ ನಿಮಗಿಲ್ಲದೇ ಹೋದರೆ ಅದು ನೀವು ಊಟಕ್ಕೆ ಕುಳಿತಾಗ ನಿಮ್ಮನ್ನೇ 'ಆಪೋಷಣ' ತೆಗೆದುಕೊಳ್ಳುತ್ತದೆ, ಎಚ್ಚರವಿರಲಿ! ಊಟಕ್ಕೆ ಕುಳಿತವರು ಲಕ್ಷಣವಾಗಿ ಊಟ ಮಾಡಬೇಕು. ಫೋನ್ ಕರೆ ಮಾಡುವವರಿಗೆ ನೀವು ಊಟಕ್ಕೆ ಕುಳಿತಿದ್ದೀರೆಂದು ಏನು ಗೊತ್ತಿರುತ್ತದೆ? ಅವರಿಗೆ ಅನುಕೂಲವಾದಾಗ ಫೋನ್ ಮಾಡುತ್ತಾರೆ. ಯಾರೂ ನೀವು ಊಟಮಾಡುವುದನ್ನು ಬಿಟ್ಟು ಮಧ್ಯೆ ಅವರ ಕರೆಗೆ ಉತ್ತರಿಸಬೇಕೆಂದು ನಿರೀಕ್ಷಿಸುವುದಿಲ್ಲ. ಹೇಗೂ ಅದರಲ್ಲಿ Missed Call ಮಾಹಿತಿ ಇದ್ದೇ ಇರುತ್ತದೆ. ನಂತರ ಸಂಪರ್ಕಿಸಲು ಬಂದೇ ಬರುತ್ತದೆ. ಆದರೆ ಅದೇನು ಅವಸರವೋ ಏನೋ ನಮ್ಮ ಜನರಿಗೆ ಮೊಬೈಲ್ ರಿಂಗಣಿಸಿದ ತಕ್ಷಣ ಮೈಗೆ ಕಚಗುಳಿ ಇಟ್ಟಂತೆ ಆಗುತ್ತದೆ. ಮೀಟಿಂಗ್‌ನಲ್ಲಿದ್ದವರು ಮಾತನಾಡುತ್ತಾ ಎದ್ದು ಹೊರಗೆ ಹೋಗುತ್ತಾರೆ. ಊಟ ಮಾಡುತ್ತಿದ್ದರೂ 'ಹಲೋ' ಎಂದು ಮಾತನಾಡದಿದ್ದರೆ ಸಮಾಧಾನವಾಗುವುದಿಲ್ಲ. ಕೈಯೊಳಗಿನ ತುತ್ತು ಹಾಗೆ ಇರುತ್ತದೆ. ಏಕಿಷ್ಟು ಅವಸರ ಮತ್ತು ಅವಜ್ಞೆ? ಯಾವುದಕ್ಕೆ ಎಷ್ಟು ಆದ್ಯತೆ ಕೊಡಬೇಕು ಎಂಬ ಪ್ರಜ್ಞೆ ಬೇಡವೇ? ನಿಮ್ಮ ಊಟಕ್ಕೆ ಸಂಚಕಾರವಾದ ವ್ಯವಹಾರದಿಂದ ನಿಮಗೆ ಆಗುವ ಲಾಭವಾದರೂ ಏನು? ಒಬ್ಬ ಅಜ್ಞಾತ ಕವಿಯ ಇಂಗ್ಲೀಷ್ ಪದ್ಯವನ್ನು ಆಧರಿಸಿ ನಾವು ಬರೆದ ಈ ಕೆಳಗಿನ ಕವಿತೆಯನ್ನು ಓದಿ ಮೆಲುಕುಹಾಕಿ:

**ಧನ-ಕನಕ-ಸಂಪತ್ತಿನ ಗಳಿಕೆಯ ಸಂಗ್ರಾಮದಲಿ**
**ಹಗಲಿರುಳೆನ್ನದೆ ಚಿಂತಿಸಿ ದುಡಿದು ಕೂಡಿಟ್ಟು**
**ಮೋಜು ಮೇಜವಾನಿಯ ಮೃಗಮರೀಚಿಕೆಯನರಸಿ**
**ಕೊಳ್ಳೆಹೋಹುದು ಶರೀರದಾರೋಗ್ಯವೆಲ್ಲ!**

**ರೋಗರುಜಿನಗಳಿಂ ನಲುಗಿ ಹಾಸಿಗೆಯ ಹಿಡಿದಾಗ**
**ಕಣ್ಣ ಪಿಳಿ ಪಿಳಿ ಬಿಟ್ಟು ಕಳೆದ ಆರೋಗ್ಯಮಂ ನೆನಸಿ**
**ಮಡದಿ ಮಕ್ಕಳ ಮುಖವ ನೋಡಿ ಗೋಳಿಡುತ**
**ಕೊಳ್ಳೆಹೋಹುದು ದುಡಿದೆಲ್ಲ ಸಂಪತ್ತು ಆಸ್ಪತ್ರೆಗೆ!**

**ಕೊನೆಗೆ ಸಿಕ್ಕಿದ್ದಾದರೂ ಏನು ನಿನಗೆ**
**ನಾಲ್ಕು ಜನರ ಹೆಗಲ ಮೇಲೆ ಪಯಣ**
**ಎಲ್ಲಿಗೆಂದು ತಿಳಿಯದ ಸ್ಮಶಾನ ಮೌನ**
**ಆರಡಿ ಮೂರಡಿಯ 'ಮನೆ'ಯಲ್ಲಿ ಚಿರಂತನ ಶಯನ!**

ಈ ವಿಚಾರವಾಗಿ ನೀವು ನಮ್ಮ ರಾಜಕೀಯ ಧುರೀಣರಿಂದ ಕಲಿಯಬೇಕು. ಅಧಿಕಾರ ಕೈಗೆ ಸಿಗುತ್ತದೆಯೆಂದರೆ ಸಮಾಧಿಯಿಂದಲೂ ಎದ್ದು ಕುಳಿತುಕೊಳ್ಳುವ ಪವಾಡಪುರುಷರು ಅವರು! ನಮ್ಮ ನಾಡಿನ ಅನೇಕ ಮಂತ್ರಿಗಳನ್ನು ಅವರವರ ಸಂಪ್ರದಾಯದ ಮಠಗಳಿಗೆ ಅಥವಾ ನರ್ಸಿಂಗ್‌ಹೋಂಗಳಿಗೆ ಖಾಯಂ ಆಗಿ ಸೇರಿಸುವುದು ಒಳ್ಳೆಯದು ಎನಿಸುತ್ತದೆ. ಅವರು ಮಾಡಿದಷ್ಟು ದೀರ್ಘಕಾಲ ಪೂಜೆಯನ್ನು ಯಾವ ಮಠದ ಸ್ವಾಮಿಗಳೂ ಮಾಡುವುದಿಲ್ಲ; ಅವರು ಇದ್ದಷ್ಟು ದೀರ್ಘಕಾಲ ಬಾತ್‌ರೂಂನಲ್ಲಿ ಯಾವ ಆಸ್ಪತ್ರೆಯ ರೋಗಿಯೂ ಇರುವುದಿಲ್ಲ. ನಮ್ಮ ಅನುಭವಕ್ಕೆ ಬಂದಂತೆ ಯಾರೇ ಫೋನು ಮಾಡಿದರೂ ಈ ಮಂತ್ರಿಗಳ ಆಪ್ತಸಹಾಯಕರಿಂದ ಬರುವ ಖಾಯಂ ಉತ್ತರ: "ಸಾಹೇಬರು ಬಾತ್‌ರೂಂನಲ್ಲಿದ್ದಾರೆ" ಇಲ್ಲವೇ "ಪೂಜೆಯಲ್ಲಿದ್ದಾರೆ!" ಮೊದಲನೆಯ ಪಾಳೆಯದ ಆಪ್ತಸಹಾಯಕ ಬಂದ ಕ್ಷಣದಿಂದ ಹಿಡಿದು ಎರಡನೆಯ ಪಾಳೆಯದ ಆಪ್ತಸಹಾಯಕ ಬಂದು ಹೋಗುವವರೆಗೂ ಅವರು ಬಾತ್‌ರೂಂನಿಂದ ಹೊರಬಂದಿರುವುದಿಲ್ಲ ಇಲ್ಲವೇ ಅವರ ಪೂಜೆ ಮುಗಿದಿರುವುದಿಲ್ಲ. ಸ್ವಾತಂತ್ರ್ಯ ಬಂದು ಆರು ದಶಕಗಳ ಮೇಲಾದರೂ ನಮ್ಮ ಮಂತ್ರಿಗಳ ಮನೆಯ ಬಾತ್‌ರೂಂಗಳಾಗಲೀ, ಆಪ್ತಸಹಾಯಕರಾಗಲೀ ಸುಧಾರಿಸಿದಂತೆ ತೋರುವುದಿಲ್ಲ; ಪೂಜಾಗೃಹಗಳ 'ವಾಸ್ತುದೋಷ' ನಿವಾರಣೆಯಾದಂತಿಲ್ಲ!

ಜನರ ಬದುಕಿನಲ್ಲಿ ಶಿಷ್ಟಾಚಾರ ಹಾಸುಹೊಕ್ಕಾಗಿ ಬೆರೆತಿದೆ. ಅದು ಆಯಾಯ ದೇಶದ ಪ್ರದೇಶ, ಜನಾಂಗ, ಭಾಷೆ ಮತ್ತು ಸಂಸ್ಕೃತಿಗೆ ಅನುಗುಣವಾಗಿ ವಿಭಿನ್ನವಾಗಿರುತ್ತದೆ. ಎಲ್ಲಿಯೂ ಅದನ್ನು ಬರೆದಿಟ್ಟಿರುವುದಿಲ್ಲ. ಆಯಾಯ ಪರಿಸರದಲ್ಲಿ ಹುಟ್ಟಿ ಬೆಳೆದ ಮಗು ಚಿಕ್ಕಂದಿನಿಂದ ಶಿಷ್ಟಾಚಾರಗಳನ್ನು ಮೈಗೂಡಿಸಿಕೊಳ್ಳುತ್ತದೆ. ಯಾವುದೇ ದೇಶ ಅಥವಾ ಜನಾಂಗವಿರಲಿ ಕೆಲವೊಂದು ನಡವಳಿಕೆಗಳಲ್ಲಿ ಸಾಮ್ಯತೆ ಕಂಡುಬಂದರೂ ಇನ್ನು ಕೆಲವು ವಿಚಾರಗಳಲ್ಲಿ ವಿಭಿನ್ನತೆ ಇರುತ್ತದೆ. ವಿಯೆನ್ನಾ ವಿಶ್ವವಿದ್ಯಾನಿಲಯದಲ್ಲಿ ಸಂಶೋಧಕ ವಿದ್ಯಾರ್ಥಿಯಾಗಿದ್ದಾಗ ನಮ್ಮ ಪ್ರಾಧ್ಯಾಪಕರಾಗಿದ್ದ ಪ್ರೊಫೆಸರ್ ಗೆರ್‌ಹಾರ್ಡ್ ಓಬರ್‌ಹಾಮರ್ (Gerhard Oberhammer) ರವರು ನಮ್ಮನ್ನು ಆಗಾಗ್ಗೆ ತಮ್ಮ ಮನೆಗೆ ಔತಣಕೂಟಕ್ಕೆಂದು ಕರೆಯುತ್ತಿದ್ದರು. ಅವರು ಭಾರತೀಯ ದರ್ಶನಶಾಸ್ತ್ರದಲ್ಲಿ ಅದರಲ್ಲೂ ವಿಶೇಷವಾಗಿ ಆಚಾರ್ಯ ಶ್ರೀರಾಮಾನುಜರ ವಿಶಿಷ್ಟಾದ್ವೈತ ದರ್ಶನದಲ್ಲಿ ವಿಶೇಷ ಪರಿಣತಿಯನ್ನು ಪಡೆದವರಾಗಿದ್ದರು. ಮನೆಯಲ್ಲಿದ್ದ ಅವರ ಅಧ್ಯಯನದ ಕೊಠಡಿಯು ಒಂದು ದೊಡ್ಡ ಪುಸ್ತಕಭಂಡಾರವಾಗಿತ್ತು. ಕಿಟಕಿಯ ಕಡೆಗೆ ವಿಶಾಲವಾದ ಅಧ್ಯಯನದ ಟೇಬಲ್. ಕಿಟಕಿಯಾಚೆ 'ಕಾಲೆನ್‌ಬೆರ್ಗ್' (Kahlenberg) ಬೆಟ್ಟದ ರಮಣೀಯ ದೃಶ್ಯ. ನಮ್ಮ ಪ್ರಾಧ್ಯಾಪಕರ ಮಡದಿ ಮೂಲತಃ ಹಾಲೆಂಡ್ ದೇಶದವರು. ಮನೆಗೆ ಹೋಗಿ ಕರೆಗಂಟೆ ಒತ್ತಿದ ತಕ್ಷಣವೇ ಅವರು ಬಾಗಿಲು ತೆರೆದು "Gruss Gott! Kommen Sie Herr Doktor Shivamurthy" ಎಂದು ನಮ್ಮನ್ನು ತುಂಬಾ ಆತ್ಮೀಯತೆಯಿಂದ ಬರಮಾಡಿಕೊಳ್ಳುತ್ತಿದ್ದರು. ಅವರ ಏಕಮಾತ್ರ ಪುತ್ರಿ ನಾಲ್ಕೈದು ವರ್ಷದ ಪುಟ್ಟ ಬಾಲಕಿ ಬಾರ್ಬರಾ (Barbara) ನಾವು ಬರುವುದನ್ನೇ ತುದಿಗಾಲ ಮೇಲೆ ನಿಂತು ಕಾಯುತ್ತಿದ್ದಳು. ಉಭಯಕುಶಲೋಪರಿಯಾದ ನಂತರ ಬಾಲಕಿ ಬಾರ್ಬರಾ ತನ್ನ ಕೊಠಡಿಗೆ ನಮ್ಮನ್ನು ಕರೆದುಕೊಂಡು ಹೋಗಿ ತನ್ನ ಆಟದ ಬೊಂಬೆಗಳನ್ನು ತೋರಿಸಿ ಖುಷಿಪಡುತ್ತಿದ್ದಳು. ಆಕೆಗೆ ನಮ್ಮೊಂದಿಗೆ ಇನ್ನೂ ಆಟವಾಡಬೇಕೆಂದಿರುವಷ್ಟರಲ್ಲಿಯೇ ಸಂಜೆ 6 ಗಂಟೆಗೆ ಸರಿಯಾಗಿ ಊಟಕ್ಕೆ ಕರೆ. ಯೂರೋಪಿನಲ್ಲಿ ತಂದೆತಾಯಂದಿರು ಮಕ್ಕಳನ್ನು ಬೇಗನೆ ಊಟ ಮಾಡಿಸಿ ಮಲಗಿಸುತ್ತಾರೆ. ನಾವು ಬಂದ ದಿನ ಆ ಬಾಲಕಿಗೆ ಬೇಗನೆ ಮಲಗಲು ಇಷ್ಟವಿರುತ್ತಿರಲಿಲ್ಲ. ಆ ದಿನ ನಮ್ಮ ಕಾರಣಕ್ಕಾಗಿ ಎಲ್ಲರಿಗೂ ವಿಶೇಷವಾಗಿ ಸಸ್ಯಾಹಾರದ ಅಡುಗೆ. ನಮ್ಮ ಪ್ರಾಧ್ಯಾಪಕರು ಮೊದಲೇ ನಮ್ಮಿಂದ Menu ವಿವರಗಳನ್ನು ಕೇಳಿ ಬರೆದುಕೊಂಡು ಅವರ ಮಡದಿಗೆ ಹೇಳಿ ಮಾಡಿಸುತ್ತಿದ್ದರು. ಪುಟ್ಟ ಬಾಲಕಿ ಬಾರ್ಬರಾ ಟೇಬಲ್ ನಿಲುಕದ ಕಾರಣ ಎತ್ತರದ ಕುರ್ಚಿಯಲ್ಲಿ ಕುಳಿತುಕೊಂಡು ಕೊರಳಿಗೆ 'ಬಿಬ್' (bib) ಕಟ್ಟಿಕೊಂಡು ನಮ್ಮೊಂದಿಗೆ ಹರಟೆ ಹೊಡೆಯುತ್ತಾ ಉಣ್ಣುತ್ತಿದ್ದಳು. ದೃಷ್ಟಿದೋಷದ ಕಾರಣ ಆ ಚಿಕ್ಕವಯಸ್ಸಿನಲ್ಲಿಯೇ ದಪ್ಪನೆಯ ಗಾಜಿನ ಕನ್ನಡಕ ಆಕೆಯ ದುಂಡನೆಯ ಮುಖವನ್ನೇರಿತ್ತು. ಯೂರೋಪಿನಲ್ಲಿ ಆ ವಯಸ್ಸಿನಿಂದಲೇ ತಾಯಂದಿರು ಮಕ್ಕಳಿಗೆ ಶಿಷ್ಟಾಚಾರಗಳನ್ನು (table manners) ಕಲಿಸಿಕೊಡುತ್ತಾರೆ. ಊಟಕ್ಕೆ ಏನಾದರೂ ಬಡಿಸಿದಾಗಲೆಲ್ಲಾ ಮಕ್ಕಳು 'Danke/Danke schön' (Thank you/Thank you very much) ಎಂದು ಹೇಳಲೇಬೇಕು. ಇಲ್ಲದಿದ್ದರೆ ಮಕ್ಕಳ ಕಡೆಗೆ ತಾಯಂದಿರು ಹುಸಿಕೋಪದಿಂದ ದುರುಗುಟ್ಟಿಕೊಂಡು ನೋಡುತ್ತಾರೆ. ಮಕ್ಕಳು ಧನ್ಯವಾದಗಳನ್ನು ಹೇಳಿದ ಮೇಲೆಯೇ ಅವರು ಮುಂದಿನ ಆಹಾರಪದಾರ್ಥಗಳನ್ನು ಬಡಿಸುವುದು. ನಮ್ಮ ದೇಶದಲ್ಲಿ ಊಟಕ್ಕೆ ಕುಳಿತ ಯಾವ ಮಗುವೂ ತನ್ನ ತಾಯಿಗೆ 'ಧನ್ಯವಾದ' ಹೇಳುವುದಿಲ್ಲ. ಅದನ್ನು ಕಲಿಸಿಕೊಡುವುದೂ ಇಲ್ಲ. ಇಲ್ಲಿಯ ಮಕ್ಕಳು ಯಾವ ಗಲಾಟೆಯನ್ನೂ ಮಾಡದೆ ಸುಮ್ಮನೆ ಉಂಡು ಎದ್ದು ಹೋದರೆ ತಾಯಿ ಪುಣ್ಯಮಾಡಿದ್ದಳು. ಆದರೂ ನಮ್ಮಲ್ಲಿ ತಾಯಿ ಮಕ್ಕಳ ಪ್ರೀತಿ ಅವರ ಕಣ್ಣಂಚಿನಲ್ಲಿ ಹುದುಗಿರುತ್ತದೆ! ನಮ್ಮ ದೇಶದಲ್ಲಿ ಕೈಯಲ್ಲಿ ಉಂಡರೇ ಸಮಾಧಾನ. ಆ ದೇಶಗಳಲ್ಲಿ ಕೈಯಲ್ಲಿ ಉಣ್ಣುವುದು ಅಸಭ್ಯತನ. ಮಕ್ಕಳಿಗೆ ಎಳೆ ವಯಸ್ಸಿನಲ್ಲಿಯೇ Fork ಮತ್ತು knife ಹಿಡಿದು ಹೇಗೆ ಉಣ್ಣಬೇಕೆಂದು ಕಲಿಸಿಕೊಡುತ್ತಾರೆ. ಫೋರ್ಕನ್ನು ಎಡಗೈಯಲ್ಲೂ,

ಚಾಕುವನ್ನು ಬಲಗೈಯಲ್ಲೂ ಹಿಡಿದುಕೊಳ್ಳುವುದು ಪದ್ಧತಿ. ನೀವು ಅತಿಥಿಗಳಾಗಿದ್ದರೆ ನಿಮ್ಮ ಆತಿಥೇಯರು ಉಣ್ಣಲು ಸೂಚಿಸುವವರೆಗೂ ನೀವು ಊಟ ಮಾಡಲು ಆರಂಭಿಸಬಾರದು. ಆಸ್ಟ್ರಿಯಾ ಅಥವಾ ಜರ್ಮನ್ ರಾಷ್ಟ್ರಗಳಲ್ಲಿ ಊಟಕ್ಕೆ ಬಡಿಸಿಯಾದ ಮೇಲೆ ಅತಿಥಿಗಳು ಪರಸ್ಪರ 'Guten Appetit' ಅಥವಾ 'Mahlzeit' ಎಂದು ಹೇಳಿ ಉಣ್ಣಲು ಆರಂಭಿಸುತ್ತಾರೆ. ಉಣ್ಣುವಾಗ ಬಾಯಿಮುಚ್ಚಿಕೊಂಡು ಆಹಾರವನ್ನು ಅಗಿದು ನುಂಗಬೇಕು. ಬಾಯ್ತೆರೆದು ಅಗಿಯುವ ಆಹಾರ ಕಂಡುಬಂದರೆ ಇತರೆ ಅತಿಥಿಗಳು ಅಸಹ್ಯಪಟ್ಟುಕೊಳ್ಳುತ್ತಾರೆ. ಬಾಯಲ್ಲಿ ಆಹಾರವನ್ನು ಹೆಚ್ಚು ತುರುಕುವುದಾಗಲೀ, ಬಾಯಲ್ಲಿ ಆಹಾರವಿದ್ದಾಗ ಮಾತನಾಡುವುದಾಗಲೀ ಅಸಭ್ಯತನ. ಊಟ ಮಾಡುವಾಗ ಫೋರ್ಕಿನ ಮುಳ್ಳುಗಳು ಕೆಳಮುಖವಾಗಿರಬೇಕು. ಊಟ ಮುಗಿದ ಮೇಲೆ ಅದರ ಮುಳ್ಳುಗಳನ್ನು ಮೇಲ್ಮುಖವಾಗಿರಿಸಿ ಅದರ ಜೊತೆಗೆ ಚಾಕುವನ್ನು ಪ್ಲೇಟಿನಲ್ಲಿಡಬೇಕು.

ಲಂಡನ್‌ನಲ್ಲಿರುವ ಭಾರತದ ರಾಯಭಾರಿಕಛೇರಿಯಲ್ಲಿ ಒಂದು ಕಾರ್ಯಕ್ರಮವಿತ್ತು. ಭಗ್ನಪ್ರೇಮಿ ದಿವಂಗತ ಡಯಾನಾಳ ಪತಿ ರಾಜಕುಮಾರ ಚಾರ್ಲ್ಸ್ ಅವರನ್ನು ಆಹ್ವಾನಿಸಲಾಗಿತ್ತು. ರುಚಿರುಚಿಯಾದ ಭಾರತೀಯ ಭಕ್ಷ್ಯಭೋಜ್ಯಗಳನ್ನು ಮಾಡಲಾಗಿತ್ತು. ಭಾರತೀಯ ಮಹಿಳೆಯೊಬ್ಬಳು ಉತ್ತರಭಾರತದ ವಿಶೇಷ ಸಿಹಿತಿನಿಸು 'ಹಲ್ವಾ' ಮಾಡಿದ್ದಳು. ಅದಕ್ಕೆ ಹಿತಮಿತವಾಗಿ ದ್ರಾಕ್ಷಿ-ಗೋಡಂಬಿಯನ್ನು ಬೆರೆಸಿದ್ದಳು. ಸುಂದರವಾದ ಅಪ್ಪಟ ಭಾರತೀಯ ಉಡುಗೆ-ತೊಡುಗೆಗಳನ್ನು ತೊಟ್ಟಿದ್ದ ಆ ಮಹಿಳೆ ತಾನೇ ರಾಜಕುಮಾರ ಚಾರ್ಲ್ಸ್‌ಗೆ ಬಡಿಸತೊಡಗಿದಳು. ಆಕೆ ವಿಶೇಷವಾಗಿ ತಯಾರಿಸಿದ್ದ ಸಿಹಿತಿನಿಸು 'ಹಲ್ವಾ' ಆಸ್ವಾದಿಸಿದ ರಾಜಕುಮಾರ ಚಾರ್ಲ್ಸ್ "It is so delicious, thank you!" (ಎಷ್ಟೊಂದು ರುಚಿಯಾಗಿದೆ, ಧನ್ಯವಾದಗಳು) ಎಂದು ಆಕೆಯನ್ನು ಅಭಿನಂದಿಸಿದ. ರಾಜಕುಮಾರನ ಮೆಚ್ಚುಗೆಯ ಮಾತುಗಳಿಂದ ತುಂಬಾ ಸಂತೋಷಪಟ್ಟ ಆಕೆ "It is I who prepared this sweet dish" (ನಾನೇ ಈ ಹಲ್ವಾ ತಯಾರಿಸಿದ್ದು) ಎಂದು ಹೆಮ್ಮೆಯಿಂದ ಹೇಳಿಕೊಂಡಳು. ರಾಜಕುಮಾರ ಹಲ್ವಾ ತಿಂದು ಮುಗಿಸುತ್ತಿದ್ದಂತೆ ಮತ್ತೆ ಮತ್ತೆ ಆಕೆ ಒತ್ತಾಯಪೂರ್ವಕವಾಗಿ ಬಡಿಸುತ್ತಾ ಹೋದಳು. ಪ್ರತಿಸಾರಿ ಬಡಿಸಿದಾಗಲೆಲ್ಲಾ ರಾಜಕುಮಾರ ಚಾರ್ಲ್ಸ್ ಸೌಜನ್ಯದಿಂದ "How delicious, thank you very much!" ಎಂದು ಹೇಳುತ್ತಾ ಹೋದ. ಆಕೆಯೂ "It is I who prepared this sweet dish" ಎಂದು ಪುನರುಚ್ಚರಿಸುತ್ತಾ ಹೋದಳು. ಕೊನೆಯದಾಗಿ "I'm sorry. It was so delicious but I am full" ಎಂದು ಚಾರ್ಲ್ಸ್ ಹೇಳಿದರೂ ಆ ಮಹಿಳೆ ಸುಮ್ಮನಿರದೆ "It is I who prepared this Halva" ಎಂದು ಹೇಳಿ ಮತ್ತೊಂದು ಚಮಚಾ ಹಲ್ವಾ ಬಡಿಸಲು ಮುಂದಾಗುತ್ತಿದ್ದಂತೆ ರಾಜಕುಮಾರ ಚಾರ್ಲ್ಸ್‌ನ ಸೌಜನ್ಯದ ಕಟ್ಟೆ ಒಡೆದಿತ್ತು. ಈ ಬಾರಿ ಆ ಮಹಿಳೆಯನ್ನು ಅಭಿನಂದಿಸಲು ಹೋಗದೆ ಆಕೆಯ ಕಡೆ ಹುಬ್ಬುಗಂಟಿಕ್ಕಿ ನೋಡಿ ಹೀಗೆ ಪ್ರತಿಕ್ರಿಯಿಸಿದ: "I wonder who created these grapes and cashewnuts!" (ಇದರಲ್ಲಿರುವ ದ್ರಾಕ್ಷಿಗೋಡಂಬಿಗಳನ್ನು ತಯಾರುಮಾಡಿದವರು ಯಾರು ಎಂದು ನನಗೆ ಆಶ್ಚರ್ಯವಾಗುತ್ತಿದೆ!)

**ಈಳೆ ನಿಂಬೆ ಮಾವು ಮಾದಲಕೆ ಹುಳಿನೀರೆರೆದವರಾರಯ್ಯಾ!**
**ಕಬ್ಬು ಹಲಸು ನಾರಿಕೇಳಕೆ ಬಾಳೆಗೆ ಸಿಹಿನೀರೆರೆದವರಾರಯ್ಯಾ! (ಅಕ್ಕಮಹಾದೇವಿ)**

10.6.2009

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ